# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-3755/2014/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:14-12-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ಹೆಚ್.ಶಿವಕುಮಾರ ತಂದೆ ಲೇಟ್ ಹೊನ್ನಪ್ಪ, ವಾಸ: ತೊರೆಚನ್ನಹಳ್ಳಿ ಗ್ರಾಮ, ಬೆಳಗುಂಬ ಅಂಚೆ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕ್, ರಾಮನಗರ ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಹೆಚ್.ಶಿವಕುಮಾರ ತಂದೆ ಲೇಟ್ ಹೊನ್ನಪ್ಪ, ವಾಸ: ತೊರೆಚನ್ನಹಳ್ಳಿ ಗ್ರಾಮ, ಬೆಳಗುಂಬ ಅಂಚೆ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕ್, ರಾಮನಗರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಲಕ್ಷ್ಮೀನಾರಾಯಣ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾಳರಿ ಕಾವಲು ಗ್ರಾಮ ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, (2) ಶ್ರೀ ಹೆಸ್.ಜಿ. ನಂದಕುಮರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಂಚಿನಕುಪ್ಪೆ ಗ್ರಾಮ ಪಂಚಾಯತ್, ಮಾಗಡಿ ತಾಲ್ಲೂಕ್, ರಾಮನಗರ ಜಿಲ್ಲೆ ಮತ್ತು (3) ಶ್ರೀ ಅಕ್ಕೋಜಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಮಾಗಡಿ ತಾಲ್ಲೂಕು ಪಂಚಾಯತ್ ಮತ್ತು ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿಗಳು ಆನೇಕಲ್ ತಾಲ್ಲೂಕ್ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ (4) ಶ್ರೀ ಸಿ.ಎಸ್. ತುಕಾರಾಮ ನಾಯಕ, ನಿವೃತ್ತ ಕಾರ್ಯದರ್ಶಿ ಗ್ರೇಡ್-1 ಬೆಳಗುಂಬ ಗ್ರಾಮ ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕ್, ಬೆಳಗುಂಬ ಗ್ರಾಮ ಪಂಚಾಯಿತಿಗೆ ಸೇರಿದ ಸಿಡಗನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಅನಧಿಕೃತವಾಗಿ ಗ್ರಾಮ ಠಾಣಾ ಜಮೀನು ಒತ್ತುವರಿ ಆಗಿದೆ ಅಂತ ಗ್ರಾಮಸ್ಥರು ದೂರು ಸಲ್ಲಿಸಿದರು. ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿದಾಗ ಸಿಡಗನಹಳ್ಳಿಯ ಗ್ರಾಮ ಠಾಣಾ ಭಾಗವನ್ನು ಅಳತೆ ಮಾಡಿಕೊಡಬೇಕೆಂದು ತೀರ್ಮಾನಿಸಲಾಯಿತು. ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿದಾಗ ಅಳತೆ ಮಾಡಿಸಲಿಲ್ಲ. ಗ್ರಾಮ ಸ್ವರಾಜ್ ಯೋಜನೆಯಡಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಅಂಗಡಿ ಮಳಿಗೆ ಕಟ್ಟಿಸಲು ತೀರ್ಮಾನಿಸಿದಾಗ ಪಕ್ಕದ ಸ್ವತ್ತಿನ ಮಾಲೀಕರು ರಾತ್ರೋರಾತ್ರಿ ಗ್ರಾಮ ಠಾಣಾ ಸ್ವತ್ತಿಗೆ ತಂತಿ ಬೇಲಿ ಹಾಕಿದ್ದಾರೆ. ತೆರವುಗೊಳಿಸುವಂತೆ ನೋಟೀಸ್‌ಗಳನ್ನು 2 ಸಲ ಕೊಡಲಾಗಿದೆ. ಆದರೂ ಸಹ ಅಂಗಡಿ ಮಳಿಗೆ ಕಟ್ಟುವುದನ್ನು ತಡೆಯಲು ಹುಲ್ಲಿನ ಬಣವೇ ಹಾಕುತ್ತಿದ್ದಾರೆ. ಮುಖ್ಯ

ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ಮತ್ತು ಜಿಲ್ಲಾಧಿಕಾರಿಗಳು, ರಾಮನಗರ, ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು, ಗ್ರಾ, ತಾಲ್ಲೂಕ್ ಪಂಚಾಯತ್ ಇವರಿಂದ ಸ್ಥಳ ಪರಿಶೀಲನೆ ಮಾಡಿಸಿದ್ದಾರೆ. ನಿಯೋಜಿತ ಅಧಿಕಾರಿಗಳು, ಇದು ಗ್ರಾಮ ಠಾಣಾ ಅಂತ ವರದಿ ಸಲ್ಲಿಸಿದ್ದಾರೆ. ಗ್ರಾಮ ಪಂಚಾಯತಿ ಕಾರ್ಯದರ್ಶಿಯಾದ ಶ್ರೀ ಲಕ್ಷ್ಮೀನಾರಾಯಣ ಎನ್ನುವವರು ಚುನಾಯಿತ ಸದಸ್ಯರ ಗಮನಕ್ಕೆ ತರದೆ 30-12-2012 ರಂದು ವಿಭಾಗ ಪತ್ರದಂತೆ ಖಾತೆ ಮಾಡಿರುತ್ತಾರೆ. ಈ ಖಾತಾ ಮಾಡಿರುವುದನ್ನು ಸಾಮಾನ್ಯ ಸಭೆಯಲ್ಲಿ ರದ್ದು ಮಾಡಿದ್ದಾರೆ. ಗ್ರಾಮ ಠಾಣಾ ಜಾಗ ಅತಿಕ್ರಮಣ ಆಗುವುದನ್ನು ತಡೆಯಲು ಎಲ್ಲಾರೂ ವಿಫಲರಾಗಿದ್ದಾರೆ. ಆದ್ದರಿಂದ ಒತ್ತುವರಿಯನ್ನು ತೆರವುಗೊಳಿಸಲು ಕೋರಿಕೊಂಡಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು 2005-06 ಸಾಲಿನಿಂದಲೂ ವಿವಾದಿತ ಆಸ್ತಿ ಶ್ರೀ ವೆಂಕಟರಮಣ್ಣಯ್ಯ ಮತ್ತು ಶ್ರೀ ಕೆಂಪಹನುಮಯ್ಯ ಇವರ ಹೆಸರಿನಲ್ಲಿ ಖಾತೆ ಇರುತ್ತದೆ. ವಿಭಾಗ ಪತ್ರದಂತೆ ನಾನು ಖಾತೆ ಮಾಡಿಲ್ಲ. ಆ ಅವಧಿಯಲ್ಲಿ ನಾನು ಕರ್ತವ್ಯ ನಿರ್ವಹಿಸಿಲ್ಲ. ಆದ್ದರಿಂದ ಆರೋಪದಿಂದ ನನ್ನನ್ನು ಕೈಬಿಡಬೇಕೆಂದು ಕೋರಿ ಕೊಂಡಿರುತ್ತಾರೆ.

(ಬಿ) 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಒತ್ತುವರಿ ಜಾಗವನ್ನು ತೆರವುಗೊಳಿಸಲು ನೋಟೀಸ್ ಕೊಟ್ಟಾಗ ಸದರಿ ಶ್ರೀ ವೆಂಕಟರಮಣ್ಣಯ್ಯ ರವರು ನ್ಯಾಯಾಲಯದಲ್ಲಿ ದಾವೆ ಹಾಕಿದ್ದು, ಅಸಲು ದಾವೆ ಸಂಖ್ಯೆ:15/2014 ರಲ್ಲಿ ಶಾಶ್ವತ ನಿರ್ಬಂಧಕ ಆಜ್ಞೆಯ ಡಿಕ್ರಿ ತೆಗೆದುಕೊಂಡಿದ್ದಾರೆ. ಆದ್ದರಿಂದ ತೆರವುಗೊಳಿಸಲು ಆಗುತ್ತಿಲ್ಲ ಅಂತ ತಿಳಿಸಿದ್ದಾರೆ.

(ಸಿ) 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನಿಯೋಜಿತ ಅಧಿಕಾರಿಗಳು ದಿನಾಂಕ:27-12-2013 ರಂದು ಸ್ಥಳ ತನಿಖೆ ಮಾಡಿದ್ದಾರೆ. ಒತ್ತುವರಿದಾರರು ಪಂಚಾಯಿತಿ ದಾಖಲೆಗಳಿಗೆ ಇರುವುದಕ್ಕಿಂತ ಹೆಚ್ಚುವರಿ ಸರ್ಕಾರಿ ಜಾಗವನ್ನು ಅತಿಕ್ರಮಿಸಿರುವುದಾಗಿ ವರದಿ ಮಾಡಿದ್ದಾರೆ. ಸರ್ಕಾರಿ ಜಾಗ ತೆರವುಗೊಳಿಸಲು ಈಗಾಗಲೇ ನಿರ್ದೇಶನ ನೀಡಿರುತ್ತೇನೆ. ನಾನು ಯಾವುದೇ ಕರ್ತವ್ಯಲೋಪ ಮಾಡಿಲ್ಲ ಅಂತ ನಮೂದಿಸಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ, ದೂರುದಾರರು ತಮ್ಮ ಪ್ರತ್ಯ್ಯುತ್ತರ ಸಲ್ಲಿಸಿ, ದೂರಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ಈ ಪ್ರಕರಣವನ್ನು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರ ವಿಭಾಗ, ರಾಮನಗರ ಇವರಿಗೆ ತನಿಖೆಗಾಗಿ ವಹಿಸಲಾಗಿದೆ.

(ಎ) ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರ ವಿಭಾಗ, ರಾಮನಗರ ರವರು ತಮ್ಮ ವರದಿಯಲ್ಲಿ ಶ್ರೀ ತುಕರಾಮು ಎನ್ನುವ ಹಿಂದಿನ ಕಾರ್ಯದರ್ಶಿಗಳು ಸದರಿ ಶ್ರೀ ವೆಂಕಟರಮಣ್ಯ ಮತ್ತು ಶ್ರೀ ಕೆಂಪಹನುಮಯ್ಯ ಇವರ ಹೆಸರಿಗೆ ಯಾವುದೇ ಮೂಲ

ದಾಖಲಾತಿಗಳಿಲ್ಲದೇ ಖಾತೆ ಮಾಡಿಕೊಟ್ಟಿರುವುದು ಕಂಡುಬಂದಿರುತ್ತದೆ. ನಂತರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಲಕ್ಷ್ಮಿನಾರಾಯಣ ರವರು ವಿಭಾಗ ಪತ್ರದಂತೆ ಶ್ರೀ ವೆಂಕಟರಮಣ ಇವರ ಮಕ್ಕಳಿಗೆ ಖಾತೆ ಮಾಡಿರುವುದು ಕಂಡುಬಂದಿರುತ್ತದೆ ಅಂತ ವರದಿ ಸಲ್ಲಿಸಿದ್ದಾರೆ.

6. ಶ್ರೀ ತುಕರಾಮ ಇವರನ್ನು 4ನೇ ಎದುರುದಾರರನ್ನಾಗಿ ಸೇರಿಸಿಕೊಂಡು ಅವರಿಂದ ಆಕ್ಷೇಪಣೆಯನ್ನು ಕೇಳಲಾಗಿತ್ತು. ಸದರಿ ಶ್ರೀ ತುಕಾರಾಮ ರವರು ಆಕ್ಷೇಪಣೆಯನ್ನು ಸಲ್ಲಿಸಿ, ಸರ್ಕಾರಿ ಗ್ರಾಮ ಠಾಣಾ ಜಮೀನಿನಲ್ಲಿ ನಾನು ಯಾವುದೇ ಹೊಸದಾಗಿ ಖಾತೆಯನ್ನು ಮಾಡಿಲ್ಲ. ಈ ಹಿಂದೆ ತಗ್ಗಿಕುಪ್ಪೆ ಮಂಡಲ ಪಂಚಾಯತಿಯಿಂದ ಬಂದ ರಿಜಿಸ್ಟರ್‌ನಲ್ಲಿ ಆಸ್ತಿ ಸಂಖ್ಯೆ: 20 ಶ್ರೀ ಹನುಮಯ್ಯನ ಹೆಸರಿನಲ್ಲಿತ್ತು. ಆದ್ದರಿಂದ ಅದನ್ನೇ ಮುಂದುವರೆಸಿರುವುದಾಗಿ ಹೇಳುತ್ತಾರೆ.

7. 4ನೇ ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರು ಸಲ್ಲಿಸಿರುವುದು ಸದರಿ ಶ್ರೀ ಹನುಮಯ್ಯ ಇವರು ಒತ್ತುವರಿ ಮಾಡಿಕೊಂಡಿರುವ 7500 ಚದರ ಅಡಿಗಳ ಕುರಿತಂತೆ ಇರುತ್ತದೆ. ಅವರ ಸ್ವಂತ ಮನೆ 2500 ಚದರ ಅಡಿಗಳಿಗೆ ನಮ್ಮ ಯಾವುದೇ ಆಕ್ಷೇಪಣೆ ಇಲ್ಲ. ಗ್ರಾಮಾ ಠಾಣಾದ ಒತ್ತುವರಿ ಭಾಗಕ್ಕೆ ಸದರಿ ಹುನುಮಯ್ಯ ಇವರ ಹತ್ತಿರ ಯಾವುದೇ ದಾಖಲೆ ಇಲ್ಲ ಅಂತ ತಿಳಿಸುತ್ತಾ, ಸೂಕ್ತವಾದ ಕ್ರಮ ತೆಗೆದುಕೊಳ್ಳಲು ಕೋರುತ್ತಾರೆ.

8. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ಅಸಲು ದಾವೆ ಸಂಖ್ಯೆ:15/2014 ರಲ್ಲಿ ಗ್ರಾಮ ಪಂಚಾಯಿತಿಯ ವಿರುದ್ಧ ಶಾಶ್ವತ ನಿರ್ಬಂಧಕ ಆಜ್ಞೆಯನ್ನು ಪಡೆದಿದಾರೆ. ಆದರೆ, ಡಿಕ್ರಿ ಶೆಡ್ಯೂಲಿನಲ್ಲಿ ಎ.ಸಿ.ಸಿ. ಮೇಲ್ಛಾವಣಿ ಇರುವ ಒಂದು ಮನೆ ಮತ್ತು ಖಾಲಿ ಜಾಗ ಪೂರ್ವ -ಪಶ್ಚಿಮವಾಗಿ 63 ಅಡಿ ಉತ್ತರ-ದಕ್ಷಿಣವಾಗಿ 47 ಅಡಿ ಅಂತ ತಿಳಿಸಿದ್ದು, ಚಕ್‌ಬಂದಿಯನ್ನು ನಮೂದಿಸುವಾಗ ಮಾತ್ರ ತುಂಬಾ ಜಾಣತನದಿಂದ ಪೂರ್ವಕ್ಕೆ - ಬೀದಿ, ಪಶ್ಚಿಮಕ್ಕೆ - ಸರ್ಕಾರಿ ರಸ್ತೆ, ಉತ್ತರಕ್ಕೆ - ಶ್ರೀ ಕೆಂಪಹುನುಮಯ್ಯ ಆಸ್ತಿ ದಕ್ಷಿಣಕ್ಕೆ - ವಾದಿಯ ಮನೆ ಎಂದು ತೋರಿಸಿದ್ದಾರೆ. ದಾವೆಯಲ್ಲಿ ಪಿ.ಡಿ.ಒ ರವರು ಯಾವುದೇ ಪ್ರತಿವಾದ ಪತ್ರ ಸಲ್ಲಿಸಿಲ್ಲ. ದಾವೆಯು ಡಿಕ್ರಿ ಆಗಿದೆ. ಇದರ ವಿರುದ್ಧ ಈಗ ಇತರೆ/ಮಿಸಿಲೆನಿಯಸ್ ಸಂಖ್ಯೆ: 24/2015 ಸಿವಿಲ್ ಪ್ರಕ್ರಿಯ ಸಂಹಿತೆಯ ಕ್ರಮಾದೇಶ 9 ನಿಯಮ 13 ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಈ ಡಿಕ್ರಿಯನ್ನು ನ್ಯಾಯಾಲಯವು ತೆಗೆದು ಹಾಕಿದ್ದಲ್ಲಿ ಮುಂದಿನ ಕ್ರಮ ವಹಿಸಬಹುದು. ಡಿಕ್ರಿಯಲ್ಲಿ ತೋರಿಸಿರುವ ಸ್ಥಳವನ್ನು ಬಿಟ್ಟು 7500 ರಿಂದ 10000 ಚದರ ಅಡಿಯನ್ನು ಒತ್ತುವರಿ ಮಾಡಲಾಗಿದೆ ಅಂತ ದೂರುದಾರರು ಹೇಳುತ್ತಿರುವುದರಿಂದ ತಹಶೀಲ್ದಾರ್, ಮಾಗಡಿ ರವರಿಗೆ ಬೆಳಗುಂಬ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸಿಡಗನಹಳ್ಳಿ ಗ್ರಾಮಾ ಠಾಣಾ ಜಮೀನನ್ನು ಆಜು-ಬಾಜುದಾರರಿಗೆ ನೋಟೀಸ್ ಕೊಟ್ಟು ಸಂಪೂರ್ಣವಾಗಿ ಅಳತೆ ಮಾಡಿಸಿ ಗ್ರಾಮಾ ಠಾಣಾ ಆಸ್ತಿಯಲ್ಲಿ ಯಾವುದಾದರೂ ಒತ್ತುವರಿ ಇದ್ದರೆ ನಿರ್ದಿಷ್ಟವಾದ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿತ್ತು.

9. ತಹಶೀಲ್ದಾರರು, ಮಾಗಡಿ ತಾಲ್ಲೂಕು ಇವರು ತಮ್ಮ ವರದಿಯನ್ನು ಕುಂಬಾರ ವೃತ್ತಿ ಮಾಡುವ ಕೆಂಪ ಹನುಮಯ್ಯ ಮತ್ತು ಕೃಷ್ಣಪ್ಪ ಎನ್ನುವವರು ನಕ್ಷೆಯಲ್ಲಿ ತೋರಿಸಿರುವ I & II

ಪ್ರದೇಶಗಳಲ್ಲಿ ಅನಧಿಕೃತವಾಗಿ ಸ್ವಾಧೀನ ಹೊಂದಿದ್ದಾರೆ. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಮಾಗಡಿ ಇವರಿಗೆ ಮುಂದಿನ ಕ್ರಮವನ್ನು ಕೈಗೊಳ್ಳಲು ಕಳುಹಿಸಲಾಗಿದೆ ಅಂತ ವರದಿಯನ್ನು ಸಲ್ಲಿಸಿದ್ದಾರೆ.

10. ತಹಶೀಲ್ದಾರರು ಮಗಡಿ ತಾಲ್ಲೂಕು ಇವರು ಸಲ್ಲಿಸಿರುವ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಈ ಪ್ರಕರಣದ ದೂರುದಾರರ ಪ್ರಕಾರ ಡಿಕ್ರಿಯಾಗಿರುವ ಪ್ರದೇಶ ಅಲ್ಲದೇ ಸುಮಾರು 7,500 ಚದರ ಅಡಿಯಲ್ಲಿ ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿದ್ದಾರೆ. ಅದರಂತೆ ಮಂಡಲ ಪಂಚಾಯತಿಯ ರಜಿಸ್ಟರ್ ಆಧಾರದ ಮೇಲೆ ತುಕಾರಮ ಎನ್ನುವ ಪಿ.ಡಿ.ಓ. ರವರು ಸದರಿ ಖಾಸಗಿ ವ್ಯಕ್ತಿ ಹನುಮಯ್ಯನ ಖಾತೆಯನ್ನು ಮುಂದುವರೆಸಿದ್ದಾರೆ. ಸದರಿ ಶ್ರೀ ತುಕಾರಮ ಕಾರ್ಯದರ್ಶಿಗಳು ದಿನಾಂಕ: 30-6-2008 ರಂದೇ ನಿವೃತ್ತರಾಗಿದ್ದಾರೆ. ಆದ್ದರಿಂದ, ಸದರಿ ಅಧಿಕಾರಿಯ ವಿರುದ್ಧ ಪ್ರಸ್ತುತ ಕ್ರಮ ವಹಿಸಲು ಬರುವುದಿಲ್ಲ. ಗ್ರಾಮ ಠಾಣಾದ ಸ್ಕೆಚ್ ಇಲ್ಲದೇ ಇದ್ದುದ್ದರಿಂದ ಎದುರುದಾರರಿಗೂ ಸಹ ಒತ್ತುವರಿಯನ್ನು ತೆರವುಗೊಳಿಸಲು ಸಮಸ್ಯೆ ಆಗಿರುವುದು ಕಂಡುಬರುತ್ತದೆ.

11. ತಹಶೀಲ್ದಾರರು ಮಾಗಡಿ ತಾಲ್ಲೂಕು ಇವರ ಮುಖಾಂತೆ ಸಿಡಗನಹಳ್ಳಿಯ ಗ್ರಾಮ ಠಾಣಾ ಜಮೀನನ್ನು ಈಗ ಅಳತೆ ಮಾಡಿಸಿರುವುದರಿಂದ ಮತ್ತು ಖಾಸಗಿ ವ್ಯಕ್ತಿಗಳು ಗ್ರಾಮ ಠಾಣಾ ಅಸೆಸ್‌ಮೆಂಟ್ ರಜಿಸ್ಟರ್‌ನಲ್ಲಿ ಇರುವ ವಿಸ್ತೀರ್ಣಕ್ಕಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ಸ್ವಾಧೀನ ಇರುವುದು ಕಂಡುಬಂದಿರುತ್ತದೆ.

12. ಆದ್ದರಿಂದ, ಅಸಲು ದಾವೆ ಸಂ:50/2014 ರಲ್ಲಿ ಆಗಿರುವ ಶಾಶ್ವತ ನಿರ್ಬಂಧಕಾಜ್ಞೆಯ ಸ್ಥಳವನ್ನು ಹೊರತುಪಡಿಸಿ ಉಳಿದಂತೆ ಖಾಸಗಿ ವ್ಯಕ್ತಿಗಳಿಂದ ಮಾಗಡಿ ತಾಲ್ಲೂಕಿನ ಸಿಡಗನಹಳ್ಳಿ ಗ್ರಾಮ ಠಾಣಾದಲ್ಲಿ ಆಗಿರುವ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದು ಮತ್ತು ಮಿಸ್.ನಂ.24/2015 ರಲ್ಲಿ ಏಕಪಕ್ಷೀಯ ಡಿಕ್ರಿಯನ್ನು ತೆಗೆದು ಹಾಕಲು ಸಲ್ಲಿಸಿರುವ ಅರ್ಜಿಯಲ್ಲಿ ಸಂಬಂಧಪಟ್ಟ ನ್ಯಾಯಾಲಯಕ್ಕೆ ಸಂಪೂರ್ಣ ವಿಷಯವನ್ನು ಮನವರಿಕೆ ಮಾಡುವಂತೆ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1) ರ ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 14/12/17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ